ಕಾಯುವ ಅವಶ್ಯಕತೆಯಿಲ್ಲ. ಇಂತಹ ಯೋಜನೆಗಳಿಗಾಗಿಯೇ ಒಂದು ಕ್ರಿಯಾ ಯೋಜನೆ ರೂಪಿಸಿಕೊಂಡು ಕಾರ್ಯಪ್ರವೃತ್ತರಾಗಬಹುದು. ಮಂಚನಾಯಕನಹಳ್ಳಿ ಪಂಚಾಯಿತಿಯಲ್ಲಂತೂ ಈ ಕಾರ್ಯಕ್ಕೆ ಸಾಕಷ್ಟು ಸಂಪನ್ಮೂಲ ಲಭ್ಯ ಇದೆ' ಎನ್ನುತ್ತಾರೆ ಯತೀಶ್ ಚಂದ್ರ.

ಪ್ಲಾಸ್ಟಿಕ್‌ನಿಂದಾಗುವ ದುಷ್ಪರಿಣಾಮಗಳ ಬಗ್ಗೆ ಮೊದಲು ಅವರು ಶಾಲಾ ಮಕ್ಕಳಲ್ಲಿ ಜಾಗೃತಿ ಮೂಡಿಸುತ್ತಾರೆ. ನಂತರ, ಗ್ರಾಮಗಳಲ್ಲಿ ಜಾಥಾವನ್ನೂ ನಡೆಸುತ್ತಾರೆ. ಬಳಿಕ, ಮಕ್ಕಳ ಕೈಯಲ್ಲಿಯೇ ಬಟ್ಟೆ ಚೀಲಗಳನ್ನು ಕೊಟ್ಟು, ತಂದೆ–ತಾಯಿ ಹೊರಗೆ ಹೋಗುವಾಗ ಈ ಚೀಲಗಳನ್ನು ಕೊಡಿ ಎಂದೂ ಹೇಳಿ ಕೊಡುತ್ತಾರೆ. ನಂತರ, ಅಂಗಡಿ–ಮುಂಗಟ್ಟುಗಳ ವರ್ತಕರಿಗೆ ಪ್ಲಾಸ್ಟಿಕ್ ಬಳಸದಂತೆ ಮೊದಲು ಸೂಚನೆ ನೀಡುತ್ತಾರೆ. ತಪ್ಪಿದರೆ, ದಂಡವನ್ನು ವಿಧಿಸುತ್ತಾರೆ.

‘ಮಕ್ಕಳ ಮೂಲಕ ಜಾಗೃತಿ ಮೂಡಿಸಿದರೆ ಅದು ಹೆಚ್ಚು ಪರಿಣಾಮಕಾರಿಯಾಗುತ್ತದೆ. ಬಟ್ಟೆ ಚೀಲದ ಮೇಲೆಯೂ ಗ್ರಾಮ ಪಂಚಾಯಿತಿಯ ಲೋಗೊ ಹಾಕಿ, ಪರಿಸರ ಜಾಗೃತಿಯ ಸಾಲುಗಳನ್ನು ಬರೆಸಿರುತ್ತೇವೆ. ಶಾಲೆಗಳಲ್ಲದೆ, ಕೈಗಾರಿಕೆಗಳಿಗೂ ತೆರಳಿ ಪ್ಲಾಸ್ಟಿಕ್‌ನಿಂದಾಗುವ ಹಾನಿಯ ಕುರಿತು ಜಾಗೃತಿ ಮೂಡಿಸುತ್ತೇವೆ. ಬಟ್ಟೆ ಚೀಲಗಳನ್ನು ಉಚಿತವಾಗಿ ಪೂರೈಸುವಂತೆ ಮನವಿ ಮಾಡುತ್ತೇವೆ. ಅವರು ಚೀಲಗಳನ್ನು ನೀಡಿದರೆ, ಪಂಚಾಯಿತಿಯ ಪಾಲು ಸೇರಿಸಿ, ಒಂದು ಮನೆಗೆ ಮೂರು ಚೀಲಗಳನ್ನು ವಿತರಿಸುವ ಯೋಜನೆ ರೂಪಿಸಿದ್ದೇವೆ' ಎಂದು ಹೇಳುತ್ತಾರೆ ಯತೀಶ್ ಚಂದ್ರ.




## ‘ಬಯೊ ಡಿಗ್ರೇಡಬಲ್’ ಪ್ಲಾಸ್ಟಿಕ್

ಪ್ಲಾಸ್ಟಿಕ್‌ನಿಂದ ಪರಿಸರ ಮತ್ತು ಜನ–ಜಾನುವಾರುಗಳ ಆರೋಗ್ಯದ ಮೇಲೆ ಆಗುತ್ತಿರುವ ದುಷ್ಪರಿಣಾಮಗಳು ಕಡಿಮೆಯಾಗಬೇಕೆಂದರೆ, ನಮ್ಮ ಮುಂದಿರುವ ಆಯ್ಕೆ ಪ್ಲಾಸ್ಟಿಕ್‌ಗೆ ಪರ್ಯಾಯವನ್ನು ಹುಡುಕುವುದು. ಅದರಲ್ಲಿಯೂ, ನೈಸರ್ಗಿಕವಾಗಿ ಸುಲಭವಾಗಿ ಕೊಳೆಯುವಂತಹ, ಕರಗುವಂತಹ ‘ಪ್ಲಾಸ್ಟಿಕ್’ ನಮಗೆ ಬೇಕಿದೆ. ಈ ನಿಟ್ಟಿನಲ್ಲಿ ಸಂಶೋಧನೆಗಳು ನಡೆದು, ಉತ್ಪಾದನೆಯೂ ಪ್ರಾರಂಭವಾಗಿದೆ. ಆದರೆ, ಹಲವು ಸವಾಲುಗಳು– ಆತಂಕಗಳನ್ನು ಕೂಡ ಈ ‘ಅಡ್ವಾನ್ಸ್ಡ್ ಪ್ಲಾಸ್ಟಿಕ್’ ನಮ್ಮ ಮುಂದೆ ಇಟ್ಟಿದೆ.

‘ಗ್ರೀನ್ ಪೀಸ್’ ವರದಿಯಂತೆ, 2019ರಲ್ಲಿ, ಜಾಗತಿಕವಾಗಿ ಜೈವಿಕ ಪ್ಲಾಸ್ಟಿಕ್‌ಗಳ ಉತ್ಪಾದನಾ ಸಾಮರ್ಥ್ಯ 2.11 ದಶಲಕ್ಷ ಟನ್ ಮುಟ್ಟಿತ್ತು. ಇದರಲ್ಲಿ ಶೇ. 55.5ರಷ್ಟು ಅಂದರೆ, ಸುಮಾರು 1.7 ದಶಲಕ್ಷ ಟನ್‌ಗಳಷ್ಟು ಬಯೊ ಡಿಗ್ರೇಡಬಲ್ ಪ್ಲಾಸ್ಟಿಕ್ ಉತ್ಪಾದಿಸಲಾಗಿತ್ತು. ಸದ್ಯ, ಯೂರೋಪ್ ಮತ್ತು ಉತ್ತರ ಅಮೆರಿಕ ರಾಷ್ಟ್ರಗಳಲ್ಲಿ ಈ ಬಯೊ ಡಿಗ್ರೇಡಬಲ್ ಪ್ಲಾಸ್ಟಿಕ್ ಹೆಚ್ಚು ಬಳಸಲಾಗುತ್ತಿದೆ. ಆದರೆ, ಇಂತಹ ಪ್ಲಾಸ್ಟಿಕ್‌ಗಳಿಗೆ ಏಷ್ಯಾದಲ್ಲಿ, ಅದರಲ್ಲಿಯೂ ಮುಖ್ಯವಾಗಿ ಚೀನಾ ಮತ್ತು ಭಾರತದಲ್ಲಿ ಬೇಡಿಕೆ ಹೆಚ್ಚುತ್ತಿದೆ. 2023ರ ವೇಳೆಗೆ, ಜಾಗತಿಕವಾಗಿ ಇವುಗಳ ಬೇಡಿಕೆ 5.5 ದಶಲಕ್ಷ ಟನ್‌ಗೆ ಏರಲಿದೆ.

ಜೈವಿಕ ಪ್ಲಾಸ್ಟಿಕ್‌ಗಳ ಉತ್ಪಾದನೆಯಲ್ಲಿ ಮೊದಲ ಸವಾಲು ಎದುರಾಗುವುದು ‘ತಾಂತ್ರಿಕ ಮೂಲಸೌಕರ್ಯ’ದ್ದು. ಅಂದರೆ, ಟೆಕ್ನಿಕಲ್ ಇನ್‌ಫ್ರಾಸ್ಟ್ರಕ್ಚರ್. ಈಗಿನ ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್‌ಗಳನ್ನು 200ರಿಂದ 300 ವರ್ಷ ಇಟ್ಟರೂ ಏನೂ ಆಗುವುದಿಲ್ಲ. ಆದರೆ, ಬಯೊ ಡಿಗ್ರೇಡಬಲ್ ಚೀಲಗಳನ್ನು ಒಂದು ವರ್ಷ ಇಟ್ಟರೂ ಅದರ ಸ್ವರೂಪ ಬದಲಾಗುತ್ತಾ ಬರುತ್ತದೆ. ಅಂದರೆ, ಮೊದಲ ಬಾರಿಗೆ ಬಳಸುವಾಗ ಆ ಚೀಲ 5 ಕೆ.ಜಿ. ಭಾರ ಹೊರುವಷ್ಟು ಸಾಮರ್ಥ್ಯ ಹೊಂದಿದ್ದರೆ, ವರ್ಷವಾದ ನಂತರ, ಅದು ಅಷ್ಟು ಗಟ್ಟಿಯಾಗಿರುವುದಿಲ್ಲ.

ಬೇಗ ಹಾಳಾಗುವುದರಿಂದ, ಉತ್ಪಾದನಾ ಪ್ರಮಾಣವನ್ನು ಹೆಚ್ಚಿಸಲೇಬೇಕಾಗುತ್ತದೆ. ಬೇಡಿಕೆ ಇರುವಷ್ಟು ಪೂರೈಕೆ ಆಗದಿದ್ದಾಗಲೂ ಹೊಸ ಸಮಸ್ಯೆಗಳು ಉದ್ಭವಿಸುತ್ತವೆ. ಈಗಿನ ಸಾಧನಗಳಲ್ಲಿಯೇ ಬಯೊ ಡಿಗ್ರೇಡಬಲ್ ಪ್ಲಾಸ್ಟಿಕ್‌ಗಳನ್ನು ಉತ್ಪಾದಿಸಬೇಕೆಂದರೆ, ಮೆಷಿನರಿಯಲ್ಲಿಯೂ ಕೆಲವು ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ. ಇದಕ್ಕೆ ಕಂಪನಿಗಳು ಆರಂಭಿಕ ಹೂಡಿಕೆ ಮಾಡಲೇಬೇಕಾಗುತ್ತದೆ.

ಪರಿಸರ, ಸಾಮಾಜಿಕ ಮತ್ತು ಆರ್ಥಿಕ ಸುಸ್ಥಿರತೆಯ ದೃಷ್ಟಿಯಿಂದಲೂ, ಬಯೊ ಡಿಗ್ರೇಡಬಲ್ ಪ್ಲಾಸ್ಟಿಕ್‌ಗಳು ಹಲವು ಸವಾಲುಗಳನ್ನು ನಮ್ಮ ಮುಂದೆ ಇಡುತ್ತವೆ.

## ಪರಿಸರ ಸಂಬಂಧಿ ಸವಾಲುಗಳು

ಬಯೊ ಡಿಗ್ರೇಡಬಲ್ ಪ್ಲಾಸ್ಟಿಕ್‌ಗೆ ಮೂಲ ಅಥವಾ ಆಧಾರ ಪದಾರ್ಥಗಳೆಂದರೆ, ಕೃಷಿ ಉತ್ಪನ್ನಗಳು. ಧಾನ್ಯ ಅಥವಾ ಮೆಕ್ಕೆಜೋಳ, ಆಲೂಗಡ್ಡೆ, ಮರಗೆಣಸು, ತರಕಾರಿ ಮತ್ತು ಹಣ್ಣಿನ ಸಿಪ್ಪೆಗಳು, ಅಲ್ಲದೆ, ಹತ್ತಿಯನ್ನು ಪೂರಕ ಪದಾರ್ಥವಾಗಿ ಬಳಸಲಾಗುತ್ತದೆ.

ಎಷ್ಟೇ ಪರಿಸರ ಸ್ನೇಹಿ ಎಂದರೂ, ಕೃಷಿ ಉತ್ಪನ್ನಗಳನ್ನು ಪ್ಲಾಸ್ಟಿಕ್ ರೂಪಕ್ಕೆ ತರಬೇಕೆಂದರೆ, ಕೆಲವು ರಾಸಾಯನಿಕ ಪ್ರಕ್ರಿಯೆಗಳಿಗೆ ಒಳಪಡಿಸಬೇಕಾಗುತ್ತದೆ ಮತ್ತು ರಾಸಾಯನಿಕಗಳನ್ನು ಬಳಸಬೇಕಾಗುತ್ತದೆ. ಇದರಿಂದ ಪರಿಸರ ಮತ್ತು ಜೀವವೈವಿಧ್ಯಕ್ಕೆ ಹಾನಿಯಾಗಬಹುದು. ಇಂಗಾಲದಂತಹ ವಿಷಾನಿಲದ ಪ್ರಮಾಣ ಹೆಚ್ಚಾಗಿ ಹವಾಮಾನ ವೈಪರೀತ್ಯಕ್ಕೂ ಕಾರಣವಾಗಬಹುದು.

ಕೃಷಿ ಚಟುವಟಿಕೆಗೆ ನೀರಿನ ಕೊರತೆ ಉಂಟಾಗಿ,

